
ಮಾತಾಡುತ್ತಿರುವಾಗ ಅದರಲ್ಲಿ ಗಿರಿಜೆಯ ಹೆಸರೂ ಬಂದದ್ದರಿಂದ ಇಂದು ಬಾಗಿಲು ಅಡ್ಡ ಮಾಡಿ ಅಲ್ಲೇ ಕುತೂಹಲದಿಂದ ನಿಂತಳು.

'ಗಿರಿಜೆದೊಂದು ಕರ್ಮ ಅಮ್ಮ... ನಿನ್ನೆ ರಾತ್ರೆ ಅವಳ ಮನೆಲಿ ಭಾರೀ ಗಲಾಟೆ. ನಮ್ಮ ಮನೆಯ ಹತ್ರ ಅಲ್ವಮ್ಮಾ. ಅವಳ ಅಣ್ಣ ಕುಡಿದು ಬಂದು ಅವಳ ಮೈಮೇಲೆ ಕೈ ಹಾಕಿದಾನೆ. ನಿಂಗೆ ಆ ಭಟ್ಟ ಆಗ್ತದೆ ಅಂತಾದ್ರೆ ನಾನು ಆಗಲ್ವ ಅಂತ. ಅವನ ಕೈಯಿಂದ ಅವಳನ್ನು ಬಿಡಿಸಲು ಬಾಬುಗೆ ಸಾಕಾಯ್ತು. ರಾತ್ರೆಯಿಡೀ ನಮ್ಮನೇಲೆ ಇದ್ಲು. ಎಂಥ ಗ್ರಾಚಾರ ಅಮ್ಮ ಅವಳದು' ಗಿರಿಜೆಯ ಮೇಲೆ ಮತ್ಸರ ಪಡುತ್ತಿದ್ದ ಕಮಲಿ ದುಃಖದಿಂದ ಹೇಳ್ತಾಳೊ ಸಣ್ಣ ಖುಷಿಯಿಂದ ಹೇಳ್ತಾಳೊ ಗೊತ್ತಾಗ್ಲಿಲ್ಲ ಎನಿಸಿತು. ಬಾಗಿಲು ಮುಂದು ಮಾಡಿ ಬಂದು ಕೂತ ಇಂದುವಿಗೆ ಕಣ್ಣು ತುಂಬಿ ಬಂತು.

'ಛೇ, ಏನಾಗ್ತಿದೆ ಈ ಗಿರಿಜೆಯ ಜೀವನದಲ್ಲಿ' ಓದಲು ಮನಸ್ಸಾಗದೇ ಯಾವುದೋ ಪುಸ್ತಕ ಹಿಡಿದು ಕೂತಳು. ವಿಠ್ಠು ಕಕ್ಕನೊಂದಿಗೆ... ಇರಬಹುದೇ?

ಗಾಳಿ ಓಡಿದಂತೆ ದಿನಗಳು ಓಡಿ ಇಂದು ಡಿಗ್ರಿ ಮುಗಿಸಿ ಬ್ಯಾಂಕ್ ಎಕ್ಸಾಂ ಬರೆದು ಕೆಲಸ, ಮದ್ವೆ ಎಲ್ಲವೂ ಆಗಿ ಬೆಂಗಳೂರು ತಲುಪಿದಾಗ ಗಿರಿಜೆ ಇಂದುವಿನ ಮನದಿಂದ ದೂರಾಗಿದ್ದಳು. ಅಷ್ಟಿದ್ದೂ ಊರಿಗೆ ಬಂದಾಗೆಲ್ಲ ಆಯಿ ಹತ್ರ ತಪ್ಪದೇ, 'ಮದ್ವೆ ಏನಾದ್ರೂ ಆಯ್ತೇನಮ್ಮಾ ಗಿರಿಜೆಗೆ' ಎಂದು ವಿಚಾರಿಸುತ್ತಿದ್ದುದುಂಟು. ಆಗೆಲ್ಲ ಆಯಿ ಮಾತು ಹಾರಿಸುವ ಹಾಗೆ, 'ಎಂಥದೂ ಇಲ್ಲ. ಮದ್ವೇನೇ ಬೇಡವೆನ್ನುತ್ತಾಳೆ. ಬಾಬು ಕೂಡ ಪ್ರಯತ್ನಿಸಿ ಸೋತು ಹೋಗಿದಾನೆ'.

'ಎಲ್ಲಿ ಕೆಲಸಕ್ಕೆ ಹೋಗ್ತಿದಾಳೆ' ಎಂದುದ್ದಕ್ಕೆ, 'ಇನ್ನೆಲ್ಲಿ ನಿನ್ನ ವಿಠ್ಠು ಕಕ್ಕನಲ್ಲಿ' ಎಂದು ಮಾತು ಮುಗಿಸಿದ್ದಳು.



ಅದೊಂದು ಸಲ ಹೀಗೆ ಊರಿಗೆ ಬಂದಾಗ ಪೇಟೆ ಸುತ್ತಿ ಬರೋ ಹೊತ್ತಿನಲ್ಲಿ ಎದುರು ಗಿರಿಜೆ! ಇಂದುಮತಿಗೆ ಸಂತಸವಾಯಿತು. 'ಗಿರಿಜಾ... ಹೇಗಿದ್ದೀಯೇ.'

ತನ್ನ ಎಂದಿನ ಬೆಳದಿಂಗಳ ನಗು ಸೂಸುತ್ತಾ, 'ಇಂದಮ್ಮಾ, ಚೆನ್ನಾಗಿದೀನಿ. ಯಾವಾಗ ಬಂದ್ರಿ. ಇರ್ತಿರಾ ಎರಡು ದಿನ' ಎಂದಿದ್ದಕ್ಕೆ ಇಂದು, 'ಹು ಇರ್ತಿನಿ, ಅಮ್ಮನ ಮನೆಗೆ ನಾಳೆ ಬಾ ಗಿರಿಜಾ, ತುಂಬಾ ಮಾತಾಡೋಣಾ' ಎಂದಾಗ ಅಚ್ಚರಿಯಿಂದ ಕಣ್ಣರಳಿಸಿದ್ದಳು.

'ನಾನು ಬಂದ್ರೆ ಆಗಬಹುದಾ ಅಮ್ಮನಿಗೆ.'

'ಯಾಕಾಗಲ್ಲ, ನಾನೀದಿನಿ. ಬಾ ಮಾತಾಡಬೇಕು' ಎಂದೂ ಇಲ್ಲದ ಆತ್ಮವಿಶ್ವಾಸದಿಂದ ಹೇಳಿದ್ದಳು.

ಮರುದಿನ ಅವಳನ್ನು ನೋಡಿ ಆಯಿಗೆ ಸಂತಸವಾಗದಿದ್ದರೂ, 'ಏನ್ ಗಿರ್ಜಾ, ಕಾಫಿ ಕುಡಿತಿಯೇನೇ' ಎಂದು ಕೇಳಿದ್ದಳು.

'ಕೊಡಿ ಅಮ್ಮಾ, ಎಷ್ಟು ಕಾಫಿ ಕುಡಿದಿಲ್ಲ ನಿಮ್ಮ ಕೈಯಿಂದ.'

ಕಾಫಿ ಕೊಟ್ಟು ಆಯಿ ಆಚೆ ಹೋದಾಗ ಅದೂ ಇದೂ ಮಾತಾಡಿ, ಇಂದು ನೇರವಾಗಿ ಕೇಳಿದಳು: 'ಏನೇ ಗಿರಿಜಾ, ನಾನು ಕೇಳಿದ್ದು ಸತ್ಯನಾ.'

ನಗು ಸೂಸಿ, 'ವಿಠ್ಠು ಭಟ್ರ ವಿಷ್ಯನಾ ಇಂದಮ್ಮಾ'.